ಶಿಕ್ಷಣ

ಶಿಕ್ಷಕರ ಮತ್ತು ಪೋಷಕರ ಅಂಕಣ

## ಆದರ್ಶಗಳ ಅನುಷ್ಠಾನ –೨

(ತ್ಯಾಗ ಮತ್ತು ಸೇವೆಗಳೇ ನಮ್ಮ ದೇಶದ ಆದರ್ಶಗಳು. ಅವುಗಳನ್ನು ಅನುಷ್ಠಾನಗೊಳಿಸುವ ವಿಧಾನಗಳು ಹೀಗಿವೆ: ೧. ಉತ್ಕಟ ಬಯಕೆ ೨. ಸುಖಾನುಭವದ ಸಂಸ್ಕರಣ ೩. ನೈತಿಕತೆಯ ಪ್ರತಿಜ್ಞೆಯನ್ನು ಕೈಗೊಳ್ಳುವುದು ಮತ್ತು ಪ್ರಾರ್ಥನೆ ೪. ಕರ್ಮಯೋಗದ ಅನುಷ್ಠಾನ ಮತ್ತು ೫. ಸಾಮಾಜಿಕ ಜೀವನದಲ್ಲಿ ಮೌಲ್ಯಗಳನ್ನು ಚಾಚೂ ತಪ್ಪದೆ ಅನುಸರಿಸುವುದು. ಅವುಗಳಲ್ಲಿ ಎರಡು ವಿಧಾನಗಳನ್ನು ಹಿಂದಿನ ಸಂಚಿಕೆಯಲ್ಲಿ ಚರ್ಚಿಸಲಾಗಿದೆ. ಈ ಸಂಚಿಕೆಯಲ್ಲಿ ನೈತಿಕತೆಯ ಪ್ರತಿಜ್ಞೆಯನ್ನು ಕೈಗೊಳ್ಳುವುದು ಮತ್ತು ಪ್ರಾರ್ಥನೆಯ ಬಗ್ಗೆ ಚರ್ಚಿಸಲಾಗುವುದು.)

### ನೈತಿಕತೆಯ ಪ್ರತಿಜ್ಞೆಯನ್ನು ಕೈಗೊಳ್ಳುವುದು ಮತ್ತು ಪ್ರಾರ್ಥನೆ

**ಬಯಕೆ ಮತ್ತು ಕೋಪಗಳ ನಿಯಂತ್ರಣದ ಆವಶ್ಯಕತೆ:** ಭಗವದ್ಗೀತೆಯಲ್ಲಿ ಅರ್ಜುನನು ಒಂದು ಮುಖ್ಯವಾದ ಪ್ರಶ್ನೆಯನ್ನು ಹಾಕುತ್ತಾನೆ. ಅದು ನೈತಿಕತೆಯ ಅರಿವು ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಅದು ಹೀಗಿದೆ: "ಕೃಷ್ಣ, ಮನುಷ್ಯನನ್ನು, ಅವನಿಗೆ ಇಚ್ಛೆ ಇಲ್ಲದಿದ್ದರೂ, ಪಾಪ ಮಾಡುವಂತೆ ಪ್ರೇರೇಪಿಸುವುದಾವುದು? ಹಾಗೆ ಆಚರಿಸುವಾಗ ಬಲಾತ್ಕಾರದಿಂದ ಕಟ್ಟಿಹಾಕಿದಂತೆ ಅವನು ಆಡುವನಲ್ಲಾ?" ಅದಕ್ಕೆ ಶ್ರೀಕೃಷ್ಣ ಹೀಗೆ ಹೇಳುತ್ತಾನೆ: "ರಜೋಗುಣದಿಂದ ಹುಟ್ಟುವ ಕಾಮ ಮತ್ತು ಕ್ರೋಧಗಳೇ ಇದಕ್ಕೆ ಕಾರಣ. ಅವು ಎಲ್ಲವನ್ನೂ ನುಂಗಿಬಿಡುವವು. ಅವುಗಳನ್ನೇ ಮನುಷ್ಯನ ವೈರಿಗಳು ಎಂದು ತಿಳಿದುಕೋ." (ಭಗವದ್ಗೀತೆ, ೩:೩೭)

ಇನ್ನೊಂದೆಡೆ ಮನಸ್ಸನ್ನು ನಿಯಂತ್ರಿಸದಿದ್ದರೆ, ಎಂತಹ ಕೆಡುಕುಂಟಾಗುವುದು ಎನ್ನುವುದನ್ನು ಶ್ರೀಕೃಷ್ಣನು ಹೀಗೆ ತಿಳಿಸುತ್ತಾನೆ:

"ಮನಸ್ಸಿನಲ್ಲಿ ಒಂದು ವಸ್ತುವನ್ನು ಚಿಂತಿಸುತ್ತಿದ್ದರೆ, ಆ ವ್ಯಕ್ತಿಗೆ ಅದರಲ್ಲಿಯೇ ಆಸಕ್ತಿ ಹುಟ್ಟುತ್ತದೆ. ಆಸಕ್ತಿಯಿಂದ ಕಾಮವು ಮೊಳೆಯುತ್ತದೆ. ಕಾಮದಿಂದ ಕ್ರೋಧವೂ, ಕ್ರೋಧದಿಂದ ಮೋಹವೂ ಉಂಟಾಗುವುದು. ಮೋಹದಿಂದ ನೆನಪಿನ ಶಕ್ತಿ ನಷ್ಟವಾಗುತ್ತದೆ. ಅಂತಹ ಸ್ಮೃತಿಭ್ರಂಶದಿಂದ ಬುದ್ಧಿನಾಶವೂ, ಅದರಿಂದ ಜೀವಿಯ ನಾಶವೂ ಖಂಡಿತ."
(ಭಗವದ್ಗೀತೆ, ೩:೬೨.೬೩)

ಆದ್ದರಿಂದ ಆಸೆ ಮತ್ತು ಕ್ರೋಧಗಳನ್ನು ನಿಯಂತ್ರಿಸದೆ, ಸೇವೆ ಮತ್ತು ತ್ಯಾಗಗಳನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರುವುದು ಅಸಾಧ್ಯ.

**ನೈತಿಕ ನಿಯಮಗಳು:** ಮೇಲೆ ಹೇಳಿದ ನಿಯಂತ್ರಣಕ್ಕಾಗಿ ಪ್ರಬಲವಾದ ಶಕ್ತಿಶಾಲಿ ಇಚ್ಛಾಶಕ್ತಿ ಅತ್ಯಂತ ಆವಶ್ಯಕ. ಈ ಇಚ್ಛಾಶಕ್ತಿ ಮತ್ತು ಪರಿಶುದ್ಧ ಅಂತಃಕರಣಗಳನ್ನು ಸಾಧಿಸಲು ನಮ್ಮ ಸಮಾಜದಲ್ಲಿ ಕೆಲವೊಂದು ಮೌಲ್ಯಗಳ ಅನುಷ್ಠಾನವನ್ನು ವಿಧಿಸಲಾಗಿದೆ. ಅವುಗಳನ್ನು ನಾವು ಸ್ಮೃತಿಗ್ರಂಥಗಳಲ್ಲಿ ಕಾಣಬಹುದು. ಸ್ಮೃತಿಗಳು ನೈತಿಕತೆ, ಧರ್ಮ ಮತ್ತು ಕಾನೂನುಗಳ ಬಗ್ಗೆ ಇರುವ ಅಧಿಕೃತ ಗ್ರಂಥಗಳು. ಇಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ಮಹಾರಾಜ ಮನು, ಮಹರ್ಷಿಗಳಾದ ಯಾಜ್ಞವಲ್ಕ್ಯ ಮತ್ತು ಪತಂಜಲಿಗಳು ವಿಧಿಸಿದ ಮೌಲ್ಯಗಳು ಮತ್ತು ಆಧುನಿಕ ಸಂವಿಧಾನವು ವಿಧಿಸಿದ ಕೆಲವು ಮೌಲ್ಯಗಳನ್ನು ಕೊಡಲಾಗಿದೆ.

**ಮನು:** ಸತ್ಯ, ಅಸ್ತೇಯ (ಕದಿಯದಿರುವುದು), ಶುಚಿತ್ವ, ಸಂಯಮ, ಕ್ಷಮೆ, ಧೈರ್ಯ, ಜ್ಞಾನ, ಅರಿವು, ಕೋಪದ ನಿಯಂತ್ರಣ

**ಯಾಜ್ಞವಲ್ಕ್ಯ:** ಸತ್ಯ, ಅಸ್ತೇಯ, ಸಂಯಮ, ದಾನ, ಸಹನೆ, ದಯೆ

**ಪತಂಜಲಿ:** ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ (ಸಂಗ್ರಹಿಸದೆ ಇರುವುದು), ಶೌಚ, ಸಂತೋಷ, ತಪಸ್ಸು (ಶಿಸ್ತು), ಸ್ವಾಧ್ಯಾಯ, ಈಶ್ವರ ಪ್ರಣಿಧಾನ (ಭಗವಂತನನ್ನೇ ಕೇಂದ್ರಬಿಂದುವನ್ನಾಗಿ ಮಾಡಿಕೊಂಡು ಜೀವಿಸುವುದು)

**ಭಾರತದ ಸಂವಿಧಾನ:** ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಸಹೋದರ ಭಾವನೆ

ಮೇಲಿನ ಎಲ್ಲಾ ನೈತಿಕ ಮೌಲ್ಯಗಳನ್ನು ಆಚರಿಸುವುದು ಕಠಿಣವೇ ಸರಿ. ಆದರೆ, ಈ ಮೌಲ್ಯಗಳನ್ನು ಒಂದೊಂದಾಗಿ ಅನುಷ್ಠಾನಕ್ಕೆ ತರುವ ಅಗತ್ಯವಿಲ್ಲ. ನಾವು ಎರಡು ಗುಣಗಳನ್ನು ಪ್ರಯತ್ನಪಟ್ಟು ನಮ್ಮ ವ್ಯಕ್ತಿತ್ವದಲ್ಲಿ ಬೆಳೆಸಿಕೊಂಡರೆ, ಉಳಿದವುಗಳೂ ಅವುಗಳ ಜೊತೆಗೇ ನಮಗೆ ಪ್ರಾಪ್ತವಾಗುತ್ತವೆ. ಆ ಎರಡು ಗುಣಗಳೆಂದರೆ, ಸತ್ಯ ಮತ್ತು ಬ್ರಹ್ಮಚರ್ಯ (ಇಂದ್ರಿಯನಿಗ್ರಹ).

**ಸತ್ಯಪಾಲನೆ: ಸತ್ಯಮೇವ ಜಯತೇ** – ಸತ್ಯವೇ ಗೆಲ್ಲುತ್ತದೆ ಎಂದು ಮುಂಡಕೋಪನಿಷತ್ತು ಹೇಳುತ್ತದೆ. ನಮ್ಮ ರಾಷ್ಟ್ರೀಯ ಧ್ಯೇಯವೂ ಕೂಡ ಅದೇ ಆಗಿರುವುದು ವಿಶೇಷ. ಶ್ರೀರಾಮಕೃಷ್ಣರು ತಮ್ಮ ಆರಾಧ್ಯದೈವವಾದ ಕಾಳೀಮಾತೆಯಲ್ಲಿ ಎಲ್ಲವನ್ನೂ ಸಮರ್ಪಿಸಿದರು– ಜ್ಞಾನ–ಅಜ್ಞಾನ, ಪವಿತ್ರತೆ–ಅಪವಿತ್ರತೆ, ಪುಣ್ಯ–ಪಾಪ, ಧರ್ಮ–ಅಧರ್ಮ ಎಲ್ಲವನ್ನೂ. ಆದರೆ ಅವರು ಸತ್ಯ–ಸುಳ್ಳು ಎಂಬ ದ್ವಂದ್ವವನ್ನು ಮಾತ್ರ ನುಡಿಯಲಾಗಲಿಲ್ಲ. ಏಕೆಂದರೆ, ಸತ್ಯವನ್ನು ತ್ಯಾಗ ಮಾಡಿದರೆ, ಅವರ ತ್ಯಾಗವೇ ಸುಳ್ಳಾಗಿ ಹೋಗುವುದಲ್ಲವೇ?

ಸತ್ಯಪಾಲನೆ ಅಥವಾ ಪ್ರಾಮಾಣಿಕತೆ ಎಲ್ಲ ಒಳ್ಳೆಯ ಗುಣಗಳ ಆಧಾರಸ್ತಂಭವಾಗಿದೆ ಎಂದು ಹೇಳಬಹುದು. ಅದು ಯಾವುದೇ ಸಮಾಜದ ಅಸ್ತಿತ್ವಕ್ಕೆ ಕೂಡ ಮೂಲಾಧಾರವಾಗಿದೆ. ಶ್ರೀರಾಮಕೃಷ್ಣರು ಮತ್ತೆ ಮತ್ತೆ ಹೇಳುತ್ತಿದ್ದರು: "ಯಾರು ಆಫೀಸು, ವ್ಯವಹಾರ ಮುಂತಾದ ಲೌಕಿಕ ಕಾರ್ಯಗಳಲ್ಲಿ ತೊಡಗಿದ್ದಾರೋ, ಅಂತಹವರೂ ಕೂಡ ಸತ್ಯವನ್ನು ನುಡಿಯಬೇಕು. ಸತ್ಯಪಾಲನೆಯೊಂದೇ ಈ ಕಲಿಯುಗದ ಏಕಮೇವ ಆಧ್ಯಾತ್ಮಿಕ ಸಾಧನೆ."

ನಾವು ಇತರರೊಡನೆ ಸುಳ್ಳು ವ್ಯವಹಾರದಲ್ಲಿ ತೊಡಗಿದರೆ, ಅವರ ನಂಬಿಕೆಯನ್ನು ಕಳೆದುಕೊಳ್ಳುತ್ತೇವೆ. ನಂಬಿಕೆಯ ನಷ್ಟವೆಂದರೆ ಎಲ್ಲದರ ನಷ್ಟವೇ ಆಗಿ ಪರಿಣಮಿಸುವುದು. ಅದಲ್ಲದೆ, ಸುಳ್ಳು ಹೇಳುವುದರಿಂದ ನಾವು ನಮಗೆ ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ. ಅದರಿಂದ ನಮ್ಮ ಆತ್ಮವಿಶ್ವಾಸ ಕುಂದುತ್ತದೆ. ಆತ್ಮವಿಶ್ವಾಸವಿಲ್ಲದವನು ಸಮಾಜದ ಗೌರವವನ್ನೂ ಕಳೆದುಕೊಳ್ಳುತ್ತಾನೆ. ಸತ್ಯನಿಷ್ಠೆಯಿಂದ ಜನಿಸಿದ ಶಕ್ತಿ ಮಾತ್ರವೇ ನಮ್ಮ ಸ್ವಾರ್ಥವನ್ನು ಮತ್ತು ಕಾಮನೆಗಳನ್ನು ತ್ಯಜಿಸುವುದಕ್ಕೆ ಹಾಗೂ ಬಗೆಬಗೆಯ ಪ್ರಲೋಭನೆಗಳನ್ನು ಎದುರಿಸುವುದಕ್ಕೆ ಬೇಕಾದ ಮಾನಸಿಕ ಸ್ಥೈರ್ಯವನ್ನು ನೀಡುತ್ತದೆ.

ಅಂತಹ ನೈತಿಕ ಸ್ಥೈರ್ಯ ಮಾತ್ರವೇ ನಮ್ಮನ್ನು ಭಯ, ತಪ್ಪು ಗ್ರಹಿಕೆ ಮತ್ತು ದ್ವಂದ್ವ ಭಾವನೆಗಳಿಂದ ರಕ್ಷಿಸುತ್ತದೆ.

ಸ್ವ-ನಿಯಂತ್ರಣದ ಅನುಷ್ಠಾನ: ನಮ್ಮ ಸ್ವಾರ್ಥ, ಅಹಂಕಾರ ಮತ್ತು ವೈಯಕ್ತಿಕ ಸುಖಗಳನ್ನು ತ್ಯಾಗಮಾಡಿ, ಇತರರ ಸೇವೆಗೆ ಮುಂದಾಗುವುದು ಅಷ್ಟು ಸುಲಭವಲ್ಲ. ಅದಕ್ಕಾಗಿ ಬಹಳಷ್ಟು ಮಾನಸಿಕ ಮತ್ತು ದೈಹಿಕ ಬಲ ಬೇಕಾಗುತ್ತವೆ. ಅಂತಹ ಶಕ್ತಿಯನ್ನು ಸ್ವ-ನಿಯಂತ್ರಣದಿಂದ ಮಾತ್ರವೇ ಗಳಿಸಿಕೊಳ್ಳಲು ಸಾಧ್ಯ. ಮಿತಿಮೀರಿದ ಮಾತುಕತೆ, ಅತಿಯಾಗಿ ತಿನ್ನುವುದು, ಕಾಮಲೋಲುಪತೆ - ಇವುಗಳಿಂದ ಸೋಲಾಗುವ ಶಕ್ತಿಯನ್ನು ಸಂರಕ್ಷಿಸಿ ಇಟ್ಟುಕೊಂಡಾಗ ಮಾತ್ರ ಅದು ಸಾಧ್ಯವಾಗುತ್ತದೆ. ಅದಲ್ಲದೆ ಸ್ವ-ನಿಯಂತ್ರಣವು ಇತರ ಗುಣಗಳ ಅನುಷ್ಠಾನಕ್ಕೆ ಬೇಕಾದ ಸಾಮರ್ಥ್ಯವನ್ನು ನಮಗೆ ನೀಡುತ್ತದೆ; ನಮ್ಮ ಗುರಿಗಳ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸುವುದಕ್ಕೆ ಸಹಾಯ ಮಾಡುತ್ತದೆ. ಯಾರು ಹೀಗೆ ತನ್ನ ಇಂದ್ರಿಯಗಳು ಮತ್ತು ಮನಸ್ಸಿನ ಮೇಲೆ ನಿಯಂತ್ರಣವನ್ನು ಸಾಧಿಸುವನೋ ಅವನಿಗೆ **ಜಿತೇಂದ್ರಿಯ** ಎಂದು ಕರೆಯುತ್ತಾರೆ.

### ಪ್ರಾರ್ಥನೆ

ಇತರರಲ್ಲಿ ಪ್ರೀತಿ ಮತ್ತು ಕರುಣೆಯನ್ನು ಬೆಳೆಸಿಕೊಳ್ಳುವ ಉತ್ತಮ ವಿಧಾನವೆಂದರೆ, ಅವರಿಗಾಗಿ ಪ್ರಾರ್ಥಿಸುವುದು. ಕೆಳಗೆ ಕೊಟ್ಟಿರುವ ಪ್ರಾರ್ಥನಾ ಶ್ಲೋಕಗಳು ಅದಕ್ಕೆ ನಮಗೆ ಸಹಾಯ ಮಾಡುವುವು. ಅದಲ್ಲದೆ, ದಿನನಿತ್ಯದ ಜೀವನದಲ್ಲಿ ಎಲ್ಲರೊಡನೆ ಉತ್ತಮ ಸಂಬಂಧ ಬೆಳೆಸಿಕೊಳ್ಳುವುದಕ್ಕೆ ಪ್ರೇರಣೆ ನೀಡುವುದು.

ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು ।
ಸರ್ವಃ ಸದ್ಬುದ್ಧಿಮಾಪ್ನೋತು ಸರ್ವಃ ಸರ್ವತ್ರ ನಂದತು ॥

"ಎಲ್ಲರೂ ಆಪತ್ತುಗಳಿಂದ ಪಾರಾಗಲಿ. ಎಲ್ಲರೂ ಒಳ್ಳೆಯದನ್ನೇ ನೋಡಲಿ. ಎಲ್ಲರಿಗೂ ಒಳ್ಳೆಯ ಬುದ್ಧಿಯುಂಟಾಗಲಿ. ಎಲ್ಲರೂ ಎಲ್ಲೆಲ್ಲಿಯೂ ಸಂತೋಷದಿಂದಿರಲಿ."

**ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ ।**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ ಭವೇತ್ ॥**

"ಎಲ್ಲರೂ ಸುಖಿಗಳಾಗಿರಲಿ. ಎಲ್ಲರೂ ಆರೋಗ್ಯದಿಂದ ಇರಲಿ. ಎಲ್ಲರೂ ಒಳ್ಳೆಯದನ್ನೇ ನೋಡಲಿ. ಯಾರೂ ದುಃಖಿತರಾಗದಿರಲಿ."

ದುರ್ಜನಃ ಸಜ್ಜನೋ ಭೂಯಾತ್
ಸಜ್ಜನಃ ಶಾಂತಿಮಾಪ್ನುಯಾತ್ ।
ಶಾಂತೋ ಮುಚ್ಯೇತ ಬಂಧೇಭ್ಯೋ
ಮುಕ್ತಶ್ಚಾನ್ಯಾನ್ ವಿಮೋಚಯೇತ್ ॥

"ದುರ್ಜನರು ಸಜ್ಜನರಾಗಲಿ. ಸಜ್ಜನರು ಶಾಂತಿಯನ್ನು ಹೊಂದಲಿ. ಶಾಂತರಾದವರು ಬಂಧನದಿಂದ ಮುಕ್ತರಾಗಲಿ. ಮುಕ್ತರಾದವರು ಇತರರನ್ನೂ ಬಂಧನದಿಂದ ಬಿಡಿಸಲಿ."

ಈ ಪ್ರಾರ್ಥನೆಯ ಜೊತೆಗೆ ನಾವು ಇತರರಲ್ಲಿ ದೋಷವನ್ನು ಕಾಣುವ ದುರಭ್ಯಾಸವನ್ನು ಬಿಟ್ಟುಬಿಡಬೇಕಾದುದು ಅತ್ಯಂತ ಆವಶ್ಯಕ. ಶ್ರೀಮಾತೆ ಶಾರದಾದೇವಿಯರು ತಮ್ಮ ಅಂತಿಮ ಸಂದೇಶದಲ್ಲಿ ಇದನ್ನೇ ಹೇಳುತ್ತಾರೆ: "ನಿನಗೊಂದು ಮಾತು ಹೇಳುತ್ತೇನೆ ಕೇಳು! ನಿನಗೇನಾದರೂ ಶಾಂತಿ ಬೇಕಿದ್ದರೆ, ಯಾರಲ್ಲಿಯೂ ದೋಷವನ್ನು ನೋಡಬೇಡ. ಅದರ ಬದಲು ನಿನ್ನ ದೋಷವನ್ನೇ ನೋಡಿಕೋ. ಇಡೀ ಜಗತ್ತನ್ನೇ ನಿನ್ನದನ್ನಾಗಿ ಮಾಡಲು ಕಲಿ. ನೋಡು, ಇಲ್ಲಿ ಪರಕೀಯರೆಂಬುವವರು ಯಾರೂ ಇಲ್ಲ; ಇಡೀ ಜಗತ್ತೇ ನಿನ್ನದು."

(**ಮುಂದಿನ ತಿಂಗಳು:** ತ್ಯಾಗ ಮತ್ತು ಸೇವೆಗಳನ್ನು ಅನುಷ್ಠಾನಗೊಳಿಸುವ ಇತರ ವಿಧಾನಗಳು ) (ಕೃಪೆ: Parents and Teachers in Value Education. Publisher: Ramakrishna Mission, Belur Math)

**ದಿವ್ಯಸ್ಮೃತಿಪ್ರಭ**

ಪ್ರೇಮಪೂರಿತ ಸ್ವಾಮಿ ಪ್ರೇಮಾನಂದ: ಪ್ರೀತಿಯ ಕಣ್ಣಿಗೆ ದೋಷಗಳೇನೂ ಬೀಳದು. ಒಮ್ಮೆ ಒಳ್ಳೆಯ ಮನೆತನದಲ್ಲಿ ಹುಟ್ಟಿದ ಯುವಕನೊಬ್ಬನು ದುಷ್ಟರ ಸಂಗ ಮಾಡಿದನು. ಹಲವು ಕೆಟ್ಟ ಅಭ್ಯಾಸಗಳಿಗೆ ಬಲಿಯಾದನು. ಆತನ ನಡವಳಿಕೆಯನ್ನು ತಿದ್ದಲು ಮನೆಯವರು, ಬಂಧುಮಿತ್ರರು ಬಹಳ ಪ್ರಯತ್ನ ಮಾಡಿದರು. ಅವುಗಳು ಯಾವುವೂ ಯಶಸ್ವಿಯಾಗಲಿಲ್ಲ. ಅದರಿಂದ ಎಲ್ಲರೂ ಚಿಂತಾಕ್ರಾಂತರಾದರು. ಕೊನೆಗೆ ಮನೆಯವರು ಸ್ವಾಮಿ ಪ್ರೇಮಾನಂದರ ಹತ್ತಿರ ಬಂದರು. ಹುಡುಗನ ವಿಚಾರವನ್ನೆಲ್ಲ ಸ್ವಾಮಿಗಳು ಶಾಂತವಾಗಿ ಕೇಳಿಸಿಕೊಂಡರು. ಹುಡುಗನ ಹತ್ತಿರ ಮಾತುಕತೆಯಾಡಿ, ಮಠಕ್ಕೆ ಬರಲು ಆಹ್ವಾನವಿತ್ತರು. ಯುವಕ ಅವರನ್ನು ನೋಡಲು ಮರುದಿನವೇ ಬಂದ. ಅವರ ಪ್ರೀತಿಯಿಂದ ಆಕರ್ಷಿತನಾಗಿ ಮತ್ತೆ ಮತ್ತೆ ಬರತೊಡಗಿದ. ಕ್ರಮೇಣ ಸ್ವಾಮಿ ಪ್ರೇಮಾನಂದರ ಆಧ್ಯಾತ್ಮಿಕ ಶಕ್ತಿಯು ಅವನ ನಡವಳಿಕೆಯ ಮೇಲೆ ಅದ್ಭುತ ಪರಿಣಾಮ ಬೀರತೊಡಗಿತು. ಅವನು ಮುಂದೆ ಹೇಳುತ್ತಾನೆ: "ಅದೆಷ್ಟು ಪ್ರೀತಿ ಮತ್ತು ಮಾಧುರ್ಯವನ್ನು ನನ್ನ ಮೇಲೆ ಅವರು ಹರಿಸಿದರು! ನನ್ನ ಎಲ್ಲಾ ದುರ್ಗುಣಗಳ ಬಗ್ಗೆ ಅವರಿಗೆ ಗೊತ್ತಿತ್ತು. ಆದರೂ ನನ್ನನ್ನು ಪ್ರೀತಿಸಿದರು. ನನ್ನ ಮನೆಯವರು ಮತ್ತು ಬಂಧುಗಳು ಕೂಡ ನನ್ನನ್ನು ತಿರಸ್ಕರಿಸಿದ್ದರು." ಮುಂದೆ ಆ ಯುವಕ ರಾಮಕೃಷ್ಣ ಮಹಾಸಂಘವನ್ನು ಸೇರಿ ಸಂನ್ಯಾಸಿಯಾದನು.

ಸ್ವಾಮಿ ಪ್ರೇಮಾನಂದರಿಗೆ ಮಠಕ್ಕೆ ಬಂದ ಭಕ್ತರ ಸೇವೆ ಒಂದು ವ್ರತವಾಗಿತ್ತು. ತಮ್ಮ ಬಾಳಿನ ಕಡೆಯ ದಿನಗಳಲ್ಲಿ ಅವರು ಕಾರ್ಯ ನೋಡಿಕೊಳ್ಳುತ್ತಿದ್ದ ಬ್ರಹ್ಮಚಾರಿಯನ್ನು ಕರೆದು ಕ್ಷೀಣವಾದ ದನಿಯಲ್ಲಿ ಹೇಳಿದರು: "ನನಗಾಗಿ ಒಂದು ಕೆಲಸ ಮಾಡುತ್ತೀಯಾ?" ಅದಕ್ಕೆ ಆ ಬ್ರಹ್ಮಚಾರಿ ಉತ್ತರಿಸಿದರು: "ಏನು ಬೇಕಾದರೂ ಮಾಡುತ್ತೇನೆ, ಮಹಾರಾಜ್." ಸ್ವಾಮಿ ಪ್ರೇಮಾನಂದರು, "ಹಾಗಾದರೆ, ಭಕ್ತರ ಸೇವೆಯನ್ನು ಮಾಡುವೆಯಾ?" ಎಂದು ಕೇಳಿದರು. ಬ್ರಹ್ಮಚಾರಿಗಳು ಆಶ್ವಾಸನೆ ಕೊಟ್ಟ ಮೇಲೆ, ಹೇಳಿದರು, " ನೆನಪಿಡು, ಭಕ್ತರ ಸೇವೆಯಲ್ಲಿ ಕಿಂಚಿತ್ತೂ ಚ್ಯುತಿ ಬರಬಾರದು." ಅವರ ಜೀವನದ ಕೊನೆಯಾಸೆ ಅದೇ ಆಗಿತ್ತು!

ಸ್ವಾಮಿ ಪ್ರೇಮಾನಂದರ ಬಗ್ಗೆ ಸ್ವಾಮಿ ಬ್ರಹ್ಮಾನಂದಜಿ ಹೀಗೆ ಹೇಳುತ್ತಿದ್ದರು: "ಅವನೇನು ಸಾಮಾನ್ಯ ವ್ಯಕ್ತಿಯೇ? ಎಂತಹ ಪವಿತ್ರ ಮನುಷ್ಯನೆಂದರೆ, ಅವನು ಯಾವ ಕಡೆ ದೃಷ್ಟಿ ಹಾಯಿಸುವನೋ, ಆ ದಿಕ್ಕಿನಲ್ಲಿರುವ ಎಲ್ಲವೂ ಪವಿತ್ರವಾಗಿ ಬಿಡುತ್ತದೆ."